# ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 29, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

## ೨ನೇ ಭಾಗ.

### ಇಂಡ್ಯೂಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಿನ್ಯಾಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟ್ವುಳ್ಳ ಜನಗಳು ತಮ್ಮ ಡಿಬೆಂಚರ್ಗಳನ್ನು ಎಫ್ಫೇಸ್ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ನ ಉತ್ಪತ್ತೀ ಬಾಬತು ಇದರಡೀ ಕಂಡ ನಾಟೂಗಳು, ಹಾಸನದ ಡಿಪೋದಲ್ಲಿ ಡೆಪ್ಯೂಟಿ ಕಮ್ಮಿಷನರ್ ಮತ್ತು ಫಾರೆಸ್ಟ್ ಆಫೀಸರವರಿಂದ 1887ನೇ ಇಸವಿ ಫಿಬ್ರವರೀ 3ನೇ ಮುಮ್ಮಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

| ನಾಟೂದ ತಪಶೀಲು. | | ನಾಟಾಗಳ ಸಂಖ್ಯೆ. | |
|---|---|---|---|
| ಕೂವೆ (ಪೂರ್ಣ) . | .. | 49 | |
| ನಂದಿ | .. | 151 | |
| ಹೆಸವಾ (ಕಾಡಹಲಸು) | .. | 34 | |
| ಮತ್ತಿ | .. | 17 | |
| ಕರೀಮರ | .. | 1 | |
| ಮಳಲಿ (ಯಬೊನಿ) | .. | 6 | |
| ಕಾಡುಮರ | .. | 62 | |
| | ಜುಮ್ಲಾ .... | 320 | ಸ್ವಲ್ಪ ಹೆಚ್ಚುಕಡಿಮೆ. |

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಸ್ಮಾಡಲ್ಪಟ್ಟ ಪ್ರಕಾರ ಇರತಕ್ಕನ್ನು; ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

## ಬೆಂಗಳೂರು ಡಿಸ್ಟ್ರಿಕ್ಟ್.

### ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ನಂಬರ್ 4.

ಅರ್ಜಿದಾರ ಬೆಂಗಳೂರು ನಗರ್ತಪೇಟೆಲಿರುವ ಚಿಕ್ಕಚನ್ನರಾಯಪ್ಪನವರಿಗೂ ಲಕ್ಷ್ಮಮ್ಮ.

ಅರ್ಜಿದಾರಳಿಗೆ ಘಾತೀಯಾದ ಚಿಕ್ಕಚನ್ನರಾಯಪ್ಪ ತಂದೆ ಯಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕಚನ್ನರಾಯಪ್ಪನ ಆಸ್ತಿ ಬಗ್ಯಾಗಿ ಬರತಕ್ಕ ಹೊಸಕೋಟೆ ನಂಜುಂಡಪ್ಪ ವಗೈರೆಯಿಂದ ಭೋಗ್ಯ ಮಾಡಿಕೊಂಡು ಯಿದ್ದ ಮನೆ ಭೋಗ್ಯದ ದಸ್ತೈವಜು ಬಾಬತು 600 ರೂಪಾಯಿ ಲೇಣಿಯನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂತ ಅರ್ಜೀದಾರಳು ಖಾಯಿಷ್ ಮಾಡಿರುತ್ತಾಳಾಗಿ ಸದರೀ ದರಖಾಸ್ತನ್ನು 1887ನೇ ಇಸವಿ ಫಿಬ್ರವರೀ 11ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಚನ್ನರಾಯಪ್ಪನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರತಕ್ಕದ್ದೆಂದು ಇದರಿಂದ ತಿಳಿಯಪಡಿಸಿ ಇದೆ.

ಬತಾರೀಖು 12ನೇ ಜನವರೀ 1887ನೇ ಇಸವಿ.

1887ನೇ ಇಸವಿ ಮಿಸಲೇನಿಯಸ್ ನಂಬರ್ 5.

ಅರ್ಜೀದಾರ ಬೆಂಗಳೂರು ಚವಡಯ್ಯನ ಪೇಟೆಲಿ ಗಂಗಡಿಕಾರ ವಕ್ಕಲಿಗರ ಘಾತೀಪಟ್ಟ ನರಸಿಹ್ಮಣ್ಣನ ತಮ್ಮ ಹೊನ್ನಪ್ಪ.

ಅರ್ಜೀದಾರಗೆ ಘವತಿಪಟ್ಟ ನರಸಿಹ್ಮಣ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ನರಸಿಹ್ಮಣನ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಲೇಣಿಯನ್ನು ವಸೂಲ್ ಮಾಡಿಕೊಳ್ಳುವದಕ್ಕೂ ಸದರೀಯವನ ಹೆಂಡತಿ ಮತ್ತು 12 ವರುಷ ವಯಸ್ಸುಳ್ಳ ಮಗನಿಗೂ ಸಹ ತನ್ನ ಪೋಷಣೆಯಲ್ಲಿ ಯಿಟ್ಟುಕೊಂಡಿರುವದ್ದರಿಂದ ಇವರಿಗೆ ತಾನು ಗಾರಡಿಯನ್ನಾಗಿ ಯಿರಬೇಕೆಂತ ಲೂ ಸಹ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂತ ಅರ್ಜಿದಾರನು ಖಾಯಿಷ್ ಮಾಡುತ್ತಾನೆ.

ಸದರೀ ದರಖಾಸ್ತನ್ನು 1887ನೇ ಇಸವಿ ಫಿಬ್ರವರೀ 11ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ನರಸಿಹ್ಮಣನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂತ ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 8ನೇ ಜನವರೀ 1887ನೇ ಇಸವಿ.